## ವಾರ್ಡ್ ಸಭೆ ಸಂಖ್ಯೆ.13

ದಿನಾಂಕ: 03.04.2021 ರಂದು ಸಮಯ ಬೆಳಿಗ್ಗೆ 10:30 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ (ಅಧ್ಯಕ್ಷರು)
2. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ (ಕಾರ್ಯದರ್ಶಿ)
3. ಶ್ರೀ ಮಹದೇವ ಎಂ ಸದಸ್ಯರು.
4. ಶ್ರೀ ಜಯಪಾಲ್ ಸದಸ್ಯರು.
5. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
6. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
7. ಶ್ರೀ ರಾಜೇಶ್ ಸದಸ್ಯರು.
8. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
9. ಶ್ರೀ ಗೋಪಿ ಸದಸ್ಯರು.
10. ಶ್ರೀ ವೆಂಕಟೇಶ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಛಾಯಾಪತಿ ಎಂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
12. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
13. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
14. ಶ್ರೀ ಲೋಕೇಶ್ ಪಶುಸಂಗೋಪನ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
15. ಶ್ರೀ ಮಲ್ಲಯ್ಯ ವಲಯ ಅರಣ್ಯಾ ಸಂರಕ್ಷಣ ಇಲಾಖೆ,
16. ಶ್ರೀ ನಿಂಗರಾಜು ಎನ್ ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ.
17. ಶ್ರೀ ಮಹಾಲಕ್ಷ್ಮೀಲೇಔಟ್ ಪೋಲೀಸ್ ಅಧಿಕಾರಿ, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
18. ಶ್ರೀ ದೇವಣ್ಣ ಮಾರ್ಷಲ್ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರನ್ನು, ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು.
2. ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರಿಗೆ ಹೇಳಿದರು.

Scanned with CamScanner

3. ಸಾರ್ವಜನಿಕರು ಶಂಕರನಗರ 1ನೇ ಮುಖ್ಯರಸ್ತೆಯಲ್ಲಿ ಕಾವೇರಿ ನೀರಿನ ಸಮಸ್ಯೆ ಇದೆ ಎಂದು ತಿಳಿಸಿದರು. ಇದಕ್ಕೆ ಕಾರ್ಯದರ್ಶಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.
4. ಶ್ರೀ ಜಯಪಾಲ್ ಸದಸ್ಯರು ರವರು ಗೌತಮನಗರದಲ್ಲಿರುವ ಬೋರ್‌ವೆಲ್‌ಗೆ ಕೇಬಲ್ ಅಳವಡಿಸಲು ಕೋರಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.
5. ಸಾರ್ವಜನಿಕರು ಶಂಕರನಗರ ಮುಖ್ಯರಸ್ತೆಯಲ್ಲಿ ಮನೆಯ ಮೇಲೆ ಬಂದಿರುವ ಮರದ ರೆಂಬೆಗಳನ್ನು ತೆಗೆಯಲು ಮನವಿ ಮಾಡಿಕೊಂಡರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.
6. ಸಾರ್ವಜನಿಕರು ಶಂಕರನಗರ 8ನೇ ಮುಖ್ಯರಸ್ತೆಯಲ್ಲಿ ಮನೆಯ ಕಾಂಪೌಂಡ್ ಒಳಗೆ ಬಂದಿರುವ ಮರದ ರೆಂಬೆಗಳನ್ನು ತೆಗೆಯಲು ಮನವಿ ಮಾಡಿಕೊಂಡರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಯನ್ನು ಪರಿಹರಿಸಲು ಸೂಚಿಸಲಾಗುವುದು ಎಂದು ತಿಳಿಸಿದರು.
7. ಸಾರ್ವಜನಿಕರು ಶ್ರೀಕಂಠೇಶ್ವರನಗರದಲ್ಲಿ ಬೋರ್‌ವೆಲ್ ಹಾಕಿಸಿಕೊಡುವಂತೆ ಮನವಿ ಮಾಡಿಕೊಂಡರು. ಇದಕ್ಕೆ ವಾರ್ಡ್ ಅಭಿಯಂತರರು ಬೋರ್‌ವೆಲ್ ಹಾಕಿಸಿಕೊಡುತ್ತೇವೆ ಸ್ಥಳವಕಾಶವನ್ನು ಮಾಡಿಕೊಡಬೇಕೆಂದು ಹೇಳಿದರು.
8. ವಾರ್ಡ್ ಅಭಿಯಂತರರು ಸಿಸಿ ಕ್ಯಾಮರಗಳಿಗೆ ಬೆಸ್ಕಾಂ ಅಧಿಕಾರಿಗಳು ಕಡಿತಗೊಳಿಸಿರುತ್ತಾರೆ ಆದ್ದರಿಂದ ಸದರಿ ಸಿಸಿ ಕ್ಯಾಮರಗಳಿಗೆ ವಿದ್ಯುತ್ ಮೀಟರ್‌ಗಳನ್ನು ಅಳವಡಿಸುವಂತೆ ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಲಾಗಿದೆ.
9. ಸಾರ್ವಜನಿಕರು ವಾರ್ಡ್ ಕಛೇರಿಯ ಪಕ್ಕದಲ್ಲಿ ನಿರ್ಮಿಸಲಾಗುತ್ತಿರುವ ಎಸ್.ಟಿ.ಪಿಯ ಬಗ್ಗೆ ಮಾಹಿತಿ ಕೋರಿದರು ಇದಕ್ಕೆ ವಾರ್ಡ್ ಅಭಿಯಂತರರು ಮಾಹಿತಿಯನ್ನು ನೀಡಿದರು.
10. ಸಭೆಯಲ್ಲಿ ಹಾಜರಿದ್ದ ಸದಸ್ಯರು ಕೋವಿದ್–19 ಗೆ ಸಂಬಂಧಿಸಿದ ಮಾಹಿತಿಯನ್ನು ತಿಳಿಸುವಂತೆ ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿಡ್–19 ಗೆ ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ಓದಿ ತಿಳಿಸಿದರು.
11. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು / ಕಾರ್ಯದರ್ಶಿಗಳು

ವಾರ್ಡ್ ಕಮಿಟಿ, ವಾರ್ಡ್ ಸಂಖ್ಯೆ.44
ಮಾರಪ್ಪನಪಾಳ್ಯ

Scanned with CamScanner